ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಸ್ಟೈಪೆಂಡರಿ ನೌಕರರ ಅರ್ಹ ಸೇವೆಯನ್ನು ಪಿಂಚಣಿಗೆ ಪರಿಗಣಿಸುವ ಬಗ್ಗೆ

ಶ್ರೀ ಎಸ್. ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ) -

279 (470) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) 1978ರಲ್ಲಿ ನಿರುದ್ಯೋಗಿ ಪದವೀಧರರನ್ನು ಸ್ಟೈಪೆಂಡರಿ ಮೂಲಕ ವಿವಿಧ ಇಲಾಖೆಗಳಲ್ಲಿ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) 1988ರಲ್ಲಿ ಸ್ಟೈಪೆಂಡರಿ ಪದವೀಧರರಿಗೆ ಶೇ.50ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಿ ಇಲಾಖೆಗೆ ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸ್ಟೈಪೆಂಡರಿ ಪದವೀಧರರು ಸುಮಾರು 12,13 ವರ್ಷಗಳು ಮಿತಿ ವೇತನ ಪದವೀಧರರಾಗಿ ಸೇವೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಈ) ಸ್ಟೈಪೆಂಡರಿ ಪದವೀಧರರು ಹಾಗೂ ದಿನಗೂಲಿ ನೌಕರರ ಅರ್ಹ ಸೇವೆಯನ್ನು ನಿವೃತ್ತಿ ಪಿಂಚಣಿಗೆ ಪರಿಗಣಿಸುವ ಸಂಬಂಧ ಮಾನ್ಯ ಕೆ. ಎ. ಟಿ. ನ್ಯಾಯಾಲಯದಲ್ಲಿ ದಿನಾಂಕ : 24.10.2020ರಲ್ಲಿ ತೀರ್ಪು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ಈ ತೀರ್ಪಿನಲ್ಲಿ ನಿವೃತ್ತಿ ನೌಕರರ ಅರ್ಹ ಸೇವೆಯನ್ನು ಸೇವಾ ಪಿಂಚಣಿಗೆ ಪರಿಗಣಿಸಲು ತಿಳಿಸಲಾಗಿದೆಯೇ; (ವಿವರ ಒದಗಿಸುವುದು)

(ಊ) ಮಿತಿ ವೇತನದಲ್ಲಿ ನಿರ್ವಹಿಸಿರುವ ಸೇವೆಯನ್ನು ಪರಿಗಣಿಸಿ ಪಿಂಚಣಿ ಸೌಲಭ್ಯ ನೀಡುವಂತೆ ಆದೇಶದಲ್ಲಿ ತಿಳಿಸಿದ್ದರೂ ಸಹ ಸರ್ಕಾರದಿಂದ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು;

(ಋ) ಪ್ರಸ್ತುತ ಯಾವ ರೀತಿ ಅರ್ಹ ಸೇವೆಯನ್ನು ಪರಿಗಣಿಸಲಾಗಿದೆ; (ವಿವರ ಒದಗಿಸುವುದು)

(ಎ) ಮಾನ್ಯ ಕೆ. ಎ. ಟಿ ನ್ಯಾಯಾಲಯದ ತೀರ್ಪಿನಂತೆ ಯಾವ ಕಾಲಮಿತಿಯೊಳಗೆ ಈ ನಿವೃತ್ತಿ ನೌಕರರಿಗೆ ನ್ಯಾಯ ದೊರಕಿಸಲಾಗುವುದು?